ಊ. ಈ ಹಣವನ್ನು ಸರ್ಕಾರದಿಂದ ಸಗಟು ನಾಮಿನಿಗಳಿಗೆ ಮರುಪಾವತಿ ಮಾಡಲಾಗಿದೆಯೋ: ಒಂದು ವೇಳೆ ಮಾಡದೇ ಇದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ಮರುಪಾವತಿ ಮಾಡಲಾಗುವುದು ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಬೆಳಗಾವಿ ಜಿಲ್ಲೆಯ ರಾಮದುರ್ಗ ಮತ್ತು ರಾಯಬಾಗ್ ತಾಲ್ಲೂಕುಗಳನ್ನು ಹೊರತು ಪಡಿಸಿ, ಉಳಿದ ತಾಲ್ಲೂಕುಗಳಲ್ಲಿ ತಾಲ್ಲೂಕು ಹುಟ್ಟುವಳಿ ಮಾರಾಟ ಸಹಕಾರ ಸಂಘ ಸಗಟು ನಾಮಿನಿಯಾಗಿ ಕಾರ್ಯ ನಿರ್ವಹಿಸುತ್ತಿರುವುದು.

ಆ. ಹೌದು.

ಇ. ಟಿ.ಎ.ಪಿ.ಸಿ.ಎಂ.ಎಸ್. ನಿಪ್ಪಾಣಿ, ಬೆಳಗಾವಿ, ಗೋಕಾಕ್, ಸಂಕೇಶ್ವರ, ನಂದಗಡ್, ಬೈಲಹೋಂಗಲ, ಸೌಂದತ್ತಿ ಮತ್ತು ಅಥಣಿ.

ಈ. ಸದರಿ ಮಾರಾಟ ಸಹಕಾರ ಸಂಘಗಳಿಗೆ ಈ ಕೆಳಗಿನಂತೆ ಹಣವನ್ನು ಸಂಘಗಳಿಗೆ ಮರುಪಾವತಿ ಮಾಡಬೇಕಾಗಿರುತ್ತದೆ:

ಕ್ರ.ಸಂ.	ಸಂಘಗಳ ಹೆಸರು		ಮೊತ್ತ
1.	ಟಿಎಪಿಸಿಎಂಎಸ್	ಬೆಳಗಾವಿ	4,09,612–74
2.	"	ನಿಪ್ಪಾಣಿ	3,46,684–22
3.	"	ಗೋಕಾಕ್	4,32,442–69
4.	"	ಸಂಕೇಶ್ವರ್	3,33,047–86
5.	"	ನಂದಗಡ್	2,35,736–74
6.	"	ಬೈಲಹೊಂಗಲ	3,50,149–37
7.	"	ಸೌಂದತ್ತಿ	2,50,370–46
8.	"	ಅಥಣಿ	37,543–31

ಉ. ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಊ. ಸದರಿ ಹಣವನ್ನು ಈವರೆಗೆ ಮರು ಪಾವತಿ ಮಾಡಿರುವುದಿಲ್ಲ. ಆದರೆ, ಈ ಬಗ್ಗೆ ಭಾರತ ಸರ್ಕಾರದೊಂದಿಗೆ ವ್ಯವಹರಿಸಲಾಗುತ್ತಿದೆ.

ಸಚಿವಾಯಲದ ಅಧೀನ ಕಾರ್ಯದರ್ಶಿ ಹುದ್ದೆಗೆ ಭಡ್ತಿಯ ನಿಯಮ

1247 (860): ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸರ್ಕಾರದ ಸಚಿವಾಲಯದಲ್ಲಿ ಶಾಖಾಧಿಕಾರಿಯಿಂದ ಅಧೀನ ಕಾರ್ಯದರ್ಶಿ ಹುದ್ದೆಗೆ ಬಡ್ತಿ ಪಡೆಯಲು ಹಾಲಿ ಇದ್ದ 3 ವರ್ಷಗಳ ಸೇವೆಯ ಅವಧಿಯನ್ನು 5 ವರ್ಷಗಳಿಗೆ ವಿಸ್ತರಿಸಿರುವುದು ನಿಜವೇ;

ಆ. ಹಾಗಿದ್ದಲ್ಲಿ ಅದಕ್ಕೆ ಕಾರಣವೇನು;

ಇ. ಇಂತಹ ತಿದ್ದುಪಡಿಯಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ

ಏಳಿಗೆಗೆ ಧಕ್ಕೆ ಉಂಟಾಗುವುದಿಲ್ಲವೆ ಹಾಗೂ ಈ ತಿದ್ದುಪಡಿಯು 18-9-1992 ರ ಹೈಪವರ್ ಕಮಿಟಿಯ ಶಿಫಾರಸ್ಸಿಗೆ ವಿರುದ್ಧವಾಗಿಲ್ಲವೆ;

ಈ. ಸದರಿ ತಿದ್ದುಪಡಿಯು ಸರ್ಕಾರದ ಅಧಿಕೃತ ಟಿಪ್ಪಣಿ ಸಂಖ್ಯೆ:ಸಿಆಸುಇ 126 ಎಸ್‌ಸಿಆರ್ 82 ದಿನಾಂಕ: 26-11-1992 ರ ಆದೇಶಕ್ಕೆ ವಿರುದ್ಧವಾಗಿಲ್ಲವೆ;

ಉ. ಹಾಗಿದ್ದಲ್ಲಿ ಸದರಿ ತಿದ್ದುಪಡಿಯನ್ನು ಹಿಂದಕ್ಕೆ ಪಡೆದು ಈಗಾಗಲೇ ಇರುವ ಮೂರು ವರ್ಷಗಳ ಮತ್ತೆ ಇಳಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಈ. ಇಲ್ಲ. ಈ ಆದೇಶವು ಈಗಲೂ ಅನ್ವಯವಾಗುತ್ತದೆ.

ಉ. ಉದ್ಭವಿಸುವುದಿಲ್ಲ.

ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಆಗುತ್ತಿರುವ ತೊಂದರೆಗಳು

125 (1896): ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು):-

ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಕರ್ತವ್ಯನಿರತ ನಿಷ್ಠ ನೌಕರ ವರ್ಗದವರಿಗೆ ತೊಂದರೆಯಾಗುತ್ತಿರುವುದು ಮತ್ತು ಮಾರ್ಚ್‌ನಿಂದ ಜೂನ್ ತಿಂಗಳವರೆಗೆ ವರ್ಗಾವಣೆಗಾಗಿ ನೌಕರರು ಅಲೆದಾಡಬೇಕಾಗಿರುವುದರಿಂದ ಸರ್ಕಾರಿ ಕೆಲಸ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೆ;

ಆ. ವರ್ಗಾವಣೆಯಲ್ಲಿ ಆಗುವ ತೊಂದರೆಗಳನ್ನು ತಪ್ಪಿಸಲು 1993-94ರ ಸಾಮಾನ್ಯ ವರ್ಗಾವಣೆಗಾಗಿ ಸರ್ಕಾರ ಕಟ್ಟುನಿಟ್ಟಿನ ಕ್ರಮವನ್ನೇನಾದಾರೂ ಕೈಗೊಳ್ಳಲು ಉದ್ದೇಶಿಸಿರುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):-

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಮೂಡಬಿದರೆಯಲ್ಲಿ ಕ್ರೀಡಾಂಗಣ

1252 (1441): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಲ್ಕಿ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ ?

ಅ. ಮೂಡಬಿದರೆಯ ಕಡಲ್ಕೆರೆಯಲ್ಲಿ ಮಂಜೂರಾದ 4 ಎಕರೆ ಸ್ಥಳದಲ್ಲಿ 200 ಮೀಟರಿನ ಟ್ರಾಕ್